ಡಿಫೆಂಡ್ ಮಾಡುವುದಕ್ಕೆ ಹೋಗುತ್ತಿದ್ದೀರೇನೋ ಎನ್ನುವಂಥ ಅಭಿಪ್ರಾಯ ಬರುತ್ತದೆ. ಆ ರೀತಿ ಏನೂ ಕಾಣುತ್ತಿಲ್ಲ. ನೀವು ದಯಮಾಡಿ ಒಂದು ತಿಂಗಳೊಳಗಾಗಿ ಈ ಸಂಸ್ಥೆಯ ವಿಚಾರಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ, ಈ ಸಂಸ್ಥೆ ಉಳಿಯಬೇಕೇ ಅಥವಾ ಈ ಸಂಸ್ಥೆಯಲ್ಲಿರುವ ಮಕ್ಕಳನ್ನೆಲ್ಲಾ ಬೇರೆ ಎಲ್ಲಿಗಾದರೂ ಕಳುಹಿಸಬೇಕೇ, ಅವರು ನಿಮ್ಮ ನಾರ್ಮ್ಸ್ ಪ್ರಕಾರ ಇಲ್ಲದೇ ಇದ್ದರೆ ಅದನ್ನು ಡೀ-ರೆಕಗ್ನೈಸ್ಮಾಡುವುದಕ್ಕೆ ಏನೆಲ್ಲಾ ವ್ಯವಸ್ಥೆ ಮಾಡಬೇಕೋ within a month's time you please complete your process of enquiry and come back to the House.

Sri S. Suresh Kumar : Director of Medical Education...

ಅಧ್ಯಕ್ಷರು : ಏನು, ಏನಿದೆ?

ಶ್ರೀ ಎಸ್. ಸುರೇಶ್ ಕುಮಾರ್ : ಈ ವಿಚಾರಗಳೆಲ್ಲಾ 1991ನೇ ಇಸವಿಯಿಂದಲೂ ಕೂಡ ಅವರಿಗೆ ಗೊತ್ತಿದೆ. ಈಗ ಇವರು...

ಅಧ್ಯಕ್ಷರು : ಅದನ್ನು ಹೆಲ್ಪ್ ಡಿಮ್ಯಾಂಡ್ಸ್ ಬಂದಾಗ ಮಾತನಾಡೋಣ. This is a Calling Attention. So, you have drawn the attention of the Government confining to the happenings in the college. If you want to discuss and debate about all those things, we are taking up in the Demand. You can participate in the discussion. You cannot discuss all matters under the sun in the Calling Attention.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರದೊಂದೇ ಪಾಯಿಂಟ್, ಅವರು ರಕ್ಷಣೆ ಕೊಡುತ್ತಿದ್ದಾರೆ.

ಅಧ್ಯಕ್ಷರು : ಯಾರಿಗೆ? Including that ತಿಳಿಸಲಿ ಅವರು If the authorities have failed, if the Director of Medical Education, if he or she has failed in her or his duties, that also will be reported to the House. ಅದನ್ನು ತಿಳಿದುಕೊಂಡು ಬಂದು ಹೇಳುತ್ತಾರೆ. Let us give them some time also. He will report to the House.

ಈಗಲೇ ಎಂದು ಕೇಳಿದರೆ ಹೇಗೆ ಅವರು ಮಾಡುತ್ತಾರೆ. ಒಂದು ತಿಂಗಳು ಕಾಲಾವಕಾಶ ಕೊಡೋಣ. You please come back with a proper and fair report to the House within a month's time.

ನಿಯಮ 351ರ ಮೇಲೆ

(i) ರಾಜ್ಯದಲ್ಲಿ ವಿಧವಾ ವೇತನ ತಾಲ್ಲೂಕು ಕಚೇರಿಗಳಿಗೆ ತಲುಪದೆ ಸಾರ್ವಜನಿಕರಿಗೆ ತೊಂದರೆ

ಶ್ರೀಮತಿ ಎನ್. ಜ್ಯೋತಿ ರೆಡ್ಡಿ (ಗೌರಿಬಿದನೂರು) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿಧವಾ ವೇತನ ಕಳೆದ 8 ತಿಂಗಳಿಂದ ತಾಲ್ಲೂಕು ಕಚೇರಿಗಳಿಗೆ ಕಳುಹಿಸದೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಈ ಬಗ್ಗೆ ಸರ್ಕಾರದ ಗಮನ ಹರಿಸಿ ಹಣ ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ರಾಜ್ಯದ 20 ಜಿಲ್ಲೆಗಳ ಒಟ್ಟು ಸುಮಾರು 4.58 ಲಕ್ಷ ನಿರ್ಗತಿಕ ವಿಧವೆಯರ ಮಾಸಾಶನಗಳ ಪಾವತಿಗೆ ಸಂಬಂಧಪಟ್ಟ ಮನಿಯಾರ್ಡರ್ ನಮೂನೆಗಳನ್ನು ಇದುವರೆವಿಗೂ ಗಣನೀಕರಣದ

ಮೂಲಕ ಬೆಂಗಳೂರಿನ ಖಜಾನೆ ಕೇಂದ್ರದಲ್ಲಿ ಗುರುತಿಸಿ ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳ ಹಂತದಲ್ಲಿ ಅಂಚೆ ಕಛೇರಿಗಳ ಮೂಲಕ ಪಾವತಿ ಮಾಡಲಾಗುತ್ತಿದೆ. ಸದರಿ ಗಣಕ ಕೇಂದ್ರದ ಗಣಕೀ ಯಂತ್ರವು ಒಮ್ಮಿದೊಮ್ಮೆಲೇ ಕೆಟ್ಟು ಹೋದ ಕಾರಣ ಮಾರ್ಚ್ 95ರಲ್ಲಿ ಸರ್ಕಾರೀ ತಾಂತ್ರಿಕ ಸಲಹಾ ಸಮಿತಿಯು ನೀಡಿದ ಅನುಮೋದನೆಯ ಮೇರೆಗೆ ಮೇ 1995ರಲ್ಲಿ ಸದರಿ ನೂತನ ಗಣಕ ಯಂತ್ರವನ್ನು ಖರೀದಿಸಿ ಸಾಗಿಸಲಾತು. ಅಂದಿನಿಂದ ಬಾಕಿಯಾದ ಜನವರಿ 1995ರಿಂದ ಜೂನ್ 1995ರ ವರೆಗಿನ ಆರು ತಿಂಗಳ ಬಾಕಿ ಪಾವತಿಯ ಮನಿಯಾರ್ಡರ್ ನಮೂನೆಗಳನ್ನು ಕೂಡಲೇ ಮುದ್ರಿಸಿ ಜುಲೈ 1995 ರೊಳಗಾಗಿ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳಿಗೆ (ಕಛೇರಿಗಳಿಗೆ) ಕಳುಹಿಸಿ ಅಂಚೆ ಕಛೇರಿಯ ಮೂಲಕ ಪಾವತಿಸುವ ಏರ್ಪಾಡು ಮಾಡಲಾಗಿದೆ. ಜುಲೈ ಮತ್ತು ಆಗಸ್ಟ್ 1995ರ ಎರಡು ತಿಂಗಳುಗಳ ಮುಂದಿನ ಬಾಕಿ ಕುರಿತಂತೆ ಮನಿಯಾರ್ಡರ್ ನಮೂನೆಗಳನ್ನು ಆಗಸ್ಟ್ 1995ರಲ್ಲಿ ಒಂದೇ ಕಂತಿನಲ್ಲಿ ಮುದ್ರಿಸಿ ಈಗಾಗಲೇ ಮುಂಚಿತವಾಗಿ ಎಲ್ಲಾ ಜಿಲ್ಲಾ ಖಜಾನೆಗಳಿಗೆ ಕಳುಹಿಸಲಾಗಿದೆ. ಈ ಮನಿಯಾರ್ಡರ್ಗಳು ಬಹುತೇಕ 1995ರ 9ನೇ ತಿಂಗಳ ನಂತರವೇ ಪಾವತಿಯಾಗಬೇಕಾಗಿರುತ್ತದೆ. ಈಗ ಖಜಾನೆ ಗಣಕ ಕೇಂದ್ರದ ಗಣಕ ಯಂತ್ರವು ಸುಸ್ಥಿತಿಯಲ್ಲಿ ನಿರ್ವಹಿಸುತ್ತಿದೆಯಾದ್ದರಿಂದ ಇನ್ನು ಮುಂದಿನ ಯಾವುದೇ ಪಾವತಿಗಳನ್ನು ಬಾಕಿಯಾಗದಂತೆ ನೋಡಿಕೊಳ್ಳಲಾಗುವುದು.

(ii) ಸರ್ಕಾರಿ ನೌಕರರಿಗೆ ವಾಹನ ಮುಂಗಡ ಹಣ ಬಿಡುಗಡೆಯಾಗದಿರುವ ಬಗ್ಗೆ

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರೀ ನೌಕರರಿಗೆ ವಾಹನ ಮುಂಗಡ ಹಣಕ್ಕಾಗಿ ಕೋರಿ ವಿವಿಧ ಇಲಾಖೆಗಳಿಂದ ಆರ್ಥಿಕ ಇಲಾಖೆಗೆ ಮಾರ್ಚಿ ತಿಂಗಳಿನಲ್ಲಿಯೇ ಮನವಿಗಳನ್ನು ಸಲ್ಲಿಸಲಾಗಿದ್ದು, ಈವರೆವಿಗೂ ಈ ಹಣವನ್ನು ಬಿಡುಗಡೆ ಮಾಡಲು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಇದಕ್ಕೆ ಕಾರಣಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ನಾನು ಹಣಕಾಸಿನ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಕಳೆದ ವರ್ಷದ 1994-95ನೇ ಸಾಲಿನಲ್ಲಿ 314.45 ಲಕ್ಷ ರೂ.ಗಳನ್ನು ವಾಹನಗಳಿಗಾಗಿ ಕೊಡಲಾಗಿದೆ. ಈ ವರ್ಷ ಮುಂಗಡ ಪತ್ರದಲ್ಲಿ ಸಾಕಷ್ಟು ಹಣ ಇದೆ. ವಾಹನಗಳ ಮುಂಗಡಕ್ಕಾಗಿ ಅರ್ಜಿ ಇಲಾಖೆ ಮುಖಾಂತರ ಏನು ಬರುತ್ತಿವೆ ಆ ಪ್ರಕಾರ ಹಣದ ಮಂಜೂರು ಆಗುತ್ತಿದೆ. ಯಾವ ಪ್ರಕರಣದಲ್ಲಿ ಹಣ ಮಂಜೂರು ಆಗಿಲ್ಲವೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

(iii) ಸಿರಾ ತಾಲ್ಲೂಕಿನ ಬುಕ್ಕಾ ಪಟ್ಟಣದಲ್ಲಿ ವಿದ್ಯುತ್ ಕೇಂದ್ರದ ಉಪಸ್ಥಾವರ ಸ್ಥಾಪನೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಬುಕ್ಕಾಪಟ್ಟ ಹೋಬಳಿ ಕೇಂದ್ರವಾಗಿದ್ದು, ವಿದ್ಯುತ್ ಅಭಾವದಿಂದ ಜನರು ತೀವ್ರತರ ತೊಂದರೆ ಅನುಭವಿಸುತ್ತಿದ್ದು ಅಲ್ಲಿ ಒಂದು ವಿದ್ಯುತ್ ಕೇಂದ್ರದ ಉಪ ಸ್ಥಾವರ ಮಂಜೂರಾತಿಗಾಗಿ ಅನೇಕ ಮನವಿಗಳನ್ನು ಸಲ್ಲಿಸಿದಾಗ್ಯೂ ಅದು ಕಾರ್ಯಗತವಾಗಿರುವುದಿಲ್ಲ. ಕೂಡಲೇ ಉಪ ಮುಖ್ಯಮಂತ್ರಿಗಳು ಅದರ ಕಡೆ ಗಮನಹರಿಸಿ ಉಪಸ್ಥಾವರವನ್ನು ಇದೇ ವರ್ಷದಲ್ಲಿ ಮಂಜೂರಾತಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಆಶ್ವಾಸನೆ ನೀಡುವಿರಾ?